

ಹೊಳಪಿನ ಕಣ್ಣು, ತೀಕ್ಷ್ಣ ನೋಟದೊಂದಿಗೆ 'ಸೈನಿಕನೆಂದರೆ ಹೀಗಿರಬೇಕು' ಎಂಬ ಪ್ರಶಂಸೆಯನ್ನು ಹೊಂದಿದ್ದನಾದರೂ ಇತರರು ಇವನನ್ನು ತುಂಡು ತುಂಡಾಗಿ ಯಾರೋ ತುಂಬಾ ಜಾಣ್ಮೆಯಿಂದ ಜೋಡಿಸಿದ್ದಾರೆಂದು ಅನುಮಾನ ಪಡುತ್ತಿದ್ದ ಬಗ್ಗೆ ಇರುವ ಎಡ್ಗರ್‌ನ ಕತೆ ಸೈಬೋರ್ಗ್‌ಗಳ ಬಗೆಗಿನ ಮೊದಲ ಸಾಹಿತ್ಯ ಕೃತಿ ಎಂದೇ ಇತಿಹಾಸದಲ್ಲಿ ದಾಖಲಾಗಿದೆ.

ಫ್ರೆಂಚ್ ಬರಹಗಾರ ಜೇನ್ ಡಿ ಲಾ ಹೈರ್ 'ನಿಕ್ಟ್ಯಾಲೋಪ್ ಆನ್ ಮಾರ್ಸ್' (1911) ಎಂಬ ಪುಸ್ತಕದಲ್ಲಿ ಕೃತಕ ಹೃದಯ, ಕಗ್ಗತ್ತಲ್ಲಲ್ಲೂ ವಸ್ತುಗಳನ್ನು ನಿಖರವಾಗಿ ಕಾಣುವ ದೃಷ್ಟಿ ಸಾಮರ್ಥ್ಯವುಳ್ಳ ಕಣ್ಣುಗಳನ್ನು ಹೊಂದಿದ್ದ ನಾಯಕನ ಕುರಿತಾದ ಕತೆಯನ್ನು ಸೈಬೋರ್ಗ್‌ಗಳ ಕುರಿತ ಪೂರ್ಣ ಪ್ರಮಾಣದ ಸಾಹಿತ್ಯ ಕೃತಿ ಎನ್ನಿಸಿದೆ. ಆ ಕೃತಿಯ ನಾಯಕ ಮಾನವ ಸಹಜ ಅಂಗಗಳ ಜೊತೆ ವಿಶೇಷ ಕ್ಷಮತೆಯ ಯಾಂತ್ರಿಕ ಅಂಗಗಳನ್ನು ಹೊಂದಿದ್ದರಿಂದ ಕತೆ ರೋಚಕವಾಗಿ ಸಾಗುತ್ತದೆಯಲ್ಲದೆ, ಹೆಚ್ಚಿನ ಕತೆ ರಾತ್ರಿ ನಡೆಯುವುದರಿಂದ ಮತ್ತು ಶಕ್ತಿ ಶಾಲಿ ಕಣ್ಣುಗಳಿಗಾಗಿಯೇ ಅದನ್ನು ನಿಕ್ಟ್ಯಾಲೋಪ್ ಎಂದು ಹೆಸರಿಸಲಾಗಿದೆ. ಫ್ರೆಂಚ್ ಭಾಷೆಯಲ್ಲಿ ಅತೀಂದ್ರಿಯ ದೃಷ್ಟಿ ಸಾಮರ್ಥ್ಯವನ್ನು ನಿಕ್ಟ್ಯಾಲೋಪ್ ಎನ್ನುತ್ತಾರೆ.

ಅಮೆರಿಕದ ವಿಜ್ಞಾನ ಬರಹಗಾರ ಎಡ್ಮಂಡ್ ಹ್ಯಾಮಿಲ್ಟನ್ ತನ್ನ ಅನೇಕ ಕೃತಿಗಳಲ್ಲಿ ಸೂಪರ್ ಹೀರೂ ಕ್ಯಾಪ್ಟನ್ ಫ್ಯೂಚರ್ ಬಗ್ಗೆ ವಿಸ್ತೃತವಾಗಿ ಕತೆ ಹೆಣೆದಿದ್ದಾನೆ. 'ದ ಕಾಮೆಟ್ ಡೂಂ' ಎಂಬ ಕೃತಿಯಲ್ಲಿ ಬಾಹ್ಯಾಕಾಶ ಶೋಧನೆಗೆ ಹೊರಡುವ ತಂಡದ ಸದಸ್ಯರ ಪಾತ್ರಗಳಿಗೆ ಸಾಮಾನ್ಯ ಮನುಷ್ಯರಿಗಿಂತ ಹೆಚ್ಚಿನ ಕ್ಷಮತೆ ನೀಡಲು ಅವರ ದೇಹಗಳಿಗೆ ಚಿತ್ರವಿಚಿತ್ರ ಯಂತ್ರದ ಭಾಗಗಳನ್ನು ಅಂಟಿಸಿ ಅವರನ್ನು ಅಸಾಮಾನ್ಯರಂತೆ ಬಿಂಬಿಸುತ್ತಾನೆ. ಒಮ್ಮೆಯಂತೂ, ಕಥಾನಾಯಕ ಕ್ಯಾಪ್ಟನ್ ಫ್ಯೂಚರ್‌ಗೆ ನೆರವಾಗಲು ಜೀವಂತ ಇರುವ ವಿಜ್ಞಾನಿ ಸೈಮನ್ ರೈಟ್‌ನ ಮಾತನಾಡುವ ಮತ್ತು ತೇಲುತ್ತ ಸಾಗುವ ಪಾರದರ್ಶಕ ಬಾಕ್ಸ್‌ನಲ್ಲಿರುವ ಮೆದುಳನ್ನೇ ಸೃಷ್ಟಿಸಿ, ಓದುಗರನ್ನು ಇನ್ನಿಲ್ಲದಂತೆ ದಂಗುಬಡಿಸುತ್ತಾನೆ. ಆತ ಬರೆದ 'ಪುಜಿಟಿವ್ ಆಫ್‌ದ ಸ್ಟಾರ್ಸ್', 'ಲಾಸ್ಟ್‌ಕಾಲ್ ಫಾರ್ ಡೂಮ್ಸ್ ಡೇ', 'ಸ್ಟಾರ್ ಮ್ಯಾನ್ ಕಮ್ ಹೋಂ'ಗಳೆಲ್ಲಾ ಮಕ್ಕಳು ದೊಡ್ಡವರೆನ್ನದೇ ಎಲ್ಲ ವರ್ಗದ ಬಹುಸಂಖ್ಯೆಯ ಓದುಗರನ್ನು ಈಗಲೂ ಹೊಂದಿವೆ.

ಅಮೆರಿಕದ ಸೈನ್ಸ್ ಥ್ರಿಲ್ಲರ್ ಬರಹಗಾರ್ತಿ ಕ್ಯಾಥರೀನ್ ಲೂಸಿಲ್ಲೆ ಮೂರ್ ಬರೆದ 'ನೋ ವುಮನ್ ಬಾರ್ನ್', ಮಹಿಳೆಯೊಬ್ಬಳು ಸೈಬೋರ್ಗ್ ಆಗಿ ಬದಲಾಗುವ ಕತೆ ಹೊಂದಿದೆ. ಸಾಹಿತ್ಯ ಕೃತಿಯೊಂದರಲ್ಲಿ ಮಹಿಳಾ ಸೈಬೋರ್ಗ್ ಪಾತ್ರ ಸೃಷ್ಟಿಯಾದದ್ದು ಅದೇ